

**ವಿಶ್ವದ ಅತ್ಯಂತ ಉದ್ದದ ಕ್ಯಾಸೆಲ್ ಎನ್ನುವ ವಿಶೇಷಣದ 'ಬುರ್ಗ್‌ಹೌಸೆನ್' ತನ್ನ ವಾಸ್ತುಶಿಲ್ಪ ಹಾಗೂ ಸುತ್ತಲಿನ ಪ್ರಾಕೃತಿಕ ಸೌಂದರ್ಯದಿಂದ ವಿಶ್ವಪ್ರಸಿದ್ಧ. ಕ್ಯಾಸೆಲ್ ಅಂಗಳದಲ್ಲಿ ನಿಂತು ನೋಡಿದರೆ ಒಂದೆಡೆ ಆಸ್ಟ್ರಿಯಾ, ಇನ್ನೊಂದು ಕಡೆ ಜರ್ಮನಿ.**

**■ ಎಸ್. ಪಿ. ವಿಜಯಲಕ್ಷ್ಮಿ**

ಕಣ್ತುಂಬಿಕೊಳ್ಳುತ್ತ, ನದಿಯ ವಯ್ಯಾರದಾಟಕ್ಕೆ ಮಂತ್ರಮುಗ್ಧವಾಗಿ ನಿಂತರೆ ಕಾಲವೇ ಸ್ತಬ್ಧಗೊಂಡಂತೆ ಭಾಸವಾಗುತ್ತದೆ.

ಬುರ್ಗ್‌ಹೌಸೆನ್ ನಗರ ಹಿಂದೊಮ್ಮೆ ವ್ಯಾಪಾರಿ ಕೇಂದ್ರ. 10ನೇ ಶತಮಾನದಲ್ಲಿ ಬುರ್ಗ್‌ಹೌಸೆನ್ ಕೌಂಟಿಯ ಸುಪರ್ದಿನಲ್ಲಿದ್ದ ಈ ಕ್ಯಾಸೆಲ್ ಸಣ್ಣ ನಿರ್ಮಾಣವಾಗಿತ್ತು. 12ನೇ ಶತಮಾನದಲ್ಲಿ ಇದು 'ಕೌಂಟ್'ಯಿಂದ ಬವೇರಿಯಾದ ಡ್ಯೂಕ್‌ನ ಕೈಸೇರಿತು. ಆ ಡ್ಯೂಕ್ (ಪ್ರಾಂತ್ಯನಾಯಕ) 'ವಿಟ್ಟೆಲ್ಸ್‌ಬ್ಯಾಖ್'ನ ಹೆಸರನ್ನು ತನ್ನ ರಾಜವಂಶದ ಹೆಸರಾಗಿಸಿ, 'ವಿಟ್ಟೆಲ್ಸ್‌ಬ್ಯಾಖ್ ಡೈನಾಸ್ಟಿ'ಗೆ ಮುನ್ನುಡಿ ಬರೆದ; ಕ್ಯಾಸಲ್ ಅನ್ನು ತನ್ನ ವಶಕ್ಕೆ ಪಡೆದುಕೊಂಡ. ಬವೇರಿಯಾ ವಿಭಾಗವಾದ ನಂತರ ಈ ರಾಜವಂಶದವರು 'ಕ್ಯಾಸೆಲ್' ಅನ್ನು ತಮ್ಮ ಎರಡನೇ ವಾಸಸ್ಥಳವನ್ನಾಗಿ ಮಾಡಿಕೊಂಡರು. ಅವರ ಮೊದಲ ರಾಜಧಾನಿ 'ಲ್ಯಾಂಡ್‌ಶಟ್'. ಆ ಸಮಯದಲ್ಲಿ ಕ್ಯಾಸೆಲ್‌ನ ನವೀಕರಣ, ವಿಸ್ತರಣೆ, ರಕ್ಷಣಾ ವ್ಯವಸ್ಥೆ ನಡೆಯಿತು. 1500ರ ಹೊತ್ತಿಗೆ ಕ್ಯಾಸೆಲ್ ಸುಭದ್ರವಾದ 'ಕೋಟೆಯರಮನೆ' ಆಗಿ ಪರಿವರ್ತನೆಗೊಂಡಿತು.

1475ರಲ್ಲಿ ಡ್ಯೂಕ್ ಮಗ ಜಾರ್ಜ್ ಮತ್ತು ಪೋಲೆಂಡ್ ದೇಶದ ರಾಜಕುಮಾರಿ ಹೆಡ್ವಿಗ್ ವಿವಾಹ ಅದ್ದೂರಿಯಾಗಿ ನಡೆಯಿತು. ರಾಣಿ ಹೆಡ್ವಿಗ್ ಈ ಕ್ಯಾಸೆಲ್‌ನಲ್ಲಿ ಬಹಳಕಾಲ ವಾಸವಿದ್ದಳು. ಅವಳಿಗೆ ಇಲ್ಲಿಯ ಸೌಂದರ್ಯ ಹುಚ್ಚು ಹಿಡಿಸಿತ್ತು. ಒಂದುಕಡೆ ಇಳಿಜಾರಿನ ಪರ್ವತದ ಕೆಳಗೆ ಹರಿಯುವ ಆಸ್ಟ್ರಿಯಾದ ಸಾಲ್ಜೆಕ್ ನದಿ, ಇನ್ನೊಂದೆಡೆ ಬವೇರಿಯಾದ ವ್ಹೋರ್ಸೇ ಸರೋವರ, ಬವೇರಿಯನ್ ಟೌನಿನ ಚಂದದ ಮನೆಗಳು... ಇವೆಲ್ಲವೂ ನಿಸರ್ಗದ ಆರಾಧಕಿ ರಾಣಿಗೆ ಇಷ್ಟವಾಗಿದ್ದರಲ್ಲಿ ಅಚ್ಚರಿಯೇನೂ ಇಲ್ಲ.

ಪರ್ವತದ ಕಿರಿದಾದ ಅಂಚಿನಲ್ಲಿರುವ ಈ ಕ್ಯಾಸೆಲ್‌ಸಂಕೀರ್ಣ ಗೋಥಿಕ್ ಮತ್ತು ಆರ್ಟ್‌ನೋವಾ (ವಾಸ್ತುಶೈಲಿ, ವಿಶಿಷ್ಟವಾದ ಒಳಾಲಂಕಾರ, ಆಭರಣ, ಗ್ಲಾಸ್ ವಿನ್ಯಾಸ ಇತ್ಯಾದಿತ್ಯಾದಿ) ವಾಸ್ತುಶೈಲಿಯ ಉತ್ತಮ ಉದಾಹರಣೆ. ಇದರ ಬಹುಭಾಗ 'ಟ್ರಾವರ್‌ಟೈನ್' ಎನ್ನುವ ಸುಣ್ಣದಕಲ್ಲಿನಿಂದ ನಿರ್ಮಾಣವಾಗಿದೆ. ಮುಖ್ಯ ಕ್ಯಾಸೆಲ್‌ನ 'ಗ್ರೇಟ್ ಹಾಲ್' ಎಂಬ ಭಾಗದಲ್ಲಿ ಮ್ಯೂಸಿಯಮ್, ಆರ್ಟ್ ಗ್ಯಾಲರಿ, ಅಮೂಲ್ಯ ಕಲಾಕೃತಿಗಳು, ಪೇಂಟಿಂಗ್‌ಗಳಿವೆ. ಕ್ಯಾಸೆಲ್‌ನ ಗೋಪುರಗಳು, ಬುರುಜುಗಳು ಗೋಥಿಕ್ ಶೈಲಿಗೆ ಉತ್ತಮ ಮಾದರಿಯಾಗಿವೆ. ಒಳಗಿನ ಉದ್ದದ ಪ್ರಾಕಾರಗಳು, ಅತ್ಯದ್ಭುತವಾದ 'ಕ್ಲಾಕ್ ಟವರ್', ಗಾರ್ಡನ್, ಅಲ್ಲಿಂದ ಕೆಳಭಾಗದಲ್ಲಿ ಕಾಣುವ ಆಸ್ಟ್ರಿಯಾ, ಜರ್ಮನಿಯ ಮನೋಹರವಾದ ನೋಟ, ಈ ಕ್ಯಾಸೆಲ್ಲನ್ನು ಪ್ರವಾಸಿಗರ ಮೆಚ್ಚಿನ ತಾಣವಾಗಿಸಿದೆ.

ವಿಶ್ವದ ಕುಖ್ಯಾತ ಸರ್ವಾಧಿಕಾರಿಗಳಲ್ಲಿ ಒಬ್ಬನಾದ ಅಡಾಲ್ಫ್ ಹಿಟ್ಲರ್ ಆಸ್ಟ್ರಿಯಾ ದೇಶದವನು. ಚಿಕ್ಕಂದಿನಿಂದ ಅವನಿಗೆ ಕಲಾವಿದನಾಗುವ ಕನಸು. ಹದಿನಾರನೇ ವಯಸ್ಸಿನವರೆಗೂ ಅನೇಕ ಚಿತ್ರಗಳನ್ನು ರಚಿಸಿದ ಹಿಟ್ಲರ್, ಆಸ್ಟ್ರಿಯಾದಲ್ಲಿ ಕೂತು, ದೂರದಲ್ಲಿ ಮೇಲೆ ಕಾಣುವ ಬುರ್ಗ್‌ಹೌಸೆನ್ ಕ್ಯಾಸೆಲ್ ಅನ್ನು ನೋಡುತ್ತಾ ಅದರ ವರ್ಣಚಿತ್ರವನ್ನು ರಚಿಸಿದ್ದಾನೆ. ಕ್ಯಾಸೆಲ್ ನೋಡುತ್ತಲೇ ದೊಡ್ಡ ಕಲಾವಿದನಾಗುವ ಕನಸು ಕಂಡ ಹಿಟ್ಲರ್, ವಿಯೆನ್ನಾದ ಪ್ರತಿಷ್ಠಿತ 'ಸ್ಕೂಲ್ ಆಫ್ ಆರ್ಟ್' ಶಾಲೆಯ ಪರೀಕ್ಷೆಯಲ್ಲಿ ಎರಡುಬಾರಿ ತಿರಸ್ಕೃತನಾಗುತ್ತಾನೆ. ಒಡೆದ ಕನಸು ಬೇರೆ ದಿಕ್ಕಿಗೆ ಹೊರಳುತ್ತದೆ. ಹೀಗೆ ಈ ಕ್ಯಾಸಲ್ ಇತಿಹಾಸದಲ್ಲಿ ಹಿಟ್ಲರ್‌ನ ನೆನಪೂ ಸೇರಿಕೊಂಡಿದೆ.

ಕ್ಯಾಸೆಲ್‌ನ ನಾಲ್ಕು ದೊಡ್ಡ ಅಲಂಕೃತ ಹಾಲ್‌ಗಳನ್ನು ಮದುವೆಯ ಆರತಕ್ಷತೆ, ನೃತ್ಯ–ಸಂಗೀತ ಸಮಾರಂಭಗಳಿಗೆ ಬಾಡಿಗೆಗೆ ಕೊಡಲಾಗುತ್ತದೆ. ರೊಮ್ಯಾಂಟಿಕ್, ಫೇರಿಟೇಲ್ ವಿವಾಹಗಳಿಗೆ ಅಲ್ಲಿಯ ಛಾಪೆಲ್ (ಚರ್ಚ್) ತಕ್ಕನಾದ ರಂಗಸಜ್ಜಿಕೆಯನ್ನು, ವ್ಯವಸ್ಥೆಯನ್ನು ಒದಗಿಸಿಕೊಡುತ್ತದೆ. ಕ್ಯಾಸೆಲ್ ವಿವಾಹ ವೇದಿಕೆ ಹಣವುಳ್ಳವರ ಕನಸೂ ಆಗಿ, ಕ್ಯಾಸೆಲ್ ಈಗ ಅದ್ದೂರಿ ವಿವಾಹಗಳಿಗೆ ಸಾಕ್ಷಿಯಾಗುತ್ತಿದೆ.

ನಾಲ್ಕು ವರ್ಷಗಳಿಗೊಮ್ಮೆ 'ಲ್ಯಾಂಡ್‌ಶಟ್ ವೆಡ್ಡಿಂಗ್ ಇವೆಂಟ್' ಹೆಸರಿನ ವರ್ಣರಂಜಿತ ಸಮಾರಂಭ ಕ್ಯಾಸೆಲ್‌ನಲ್ಲಿ ನಡೆಯುತ್ತದೆ. 1475ರಲ್ಲಿ ನಡೆದ ಜಾರ್ಜ್ ಮತ್ತು ಹೆಡ್ವಿಗ್ ವಿವಾಹದ ಪುನರ್ ಅಭಿನಯದ ಆ ಸಮಾರಂಭದಲ್ಲಿ ವಧು–ವರ ಜೋಡಿಗಳ ಅಭಿನಯ, ಅಂದಿನ ಕಾಲದ ದೃಶ್ಯಗಳು, ಬದುಕಿನ ಚಟುವಟಿಕೆಗಳು, ನೃತ್ಯ, ಸಂಗೀತ, ರೂಪಕ ಜೀವತಳೆಯುತ್ತವೆ. ಆ ಹಬ್ಬ ಎಷ್ಟರಮಟ್ಟಿಗೆ ಜನಪ್ರಿಯವೆಂದರೆ, ವಿಶ್ವದ ವಿವಿಧ ಭಾಗಗಳ ಪ್ರವಾಸಿಗರು ಅ ಇವೆಂಟ್ ನೋಡಲೆಂದೇ ಕ್ಯಾಸೆಲ್‌ಗೆ ಬರುತ್ತಾರೆ.

ವಿಶ್ವದಲ್ಲೇ ಅತ್ಯಧಿಕ ಸಂಖ್ಯೆಯ ಕ್ಯಾಸೆಲ್‌ಗಳನ್ನು ಹೊಂದಿರುವ ಜರ್ಮನಿ ದೇಶಕ್ಕೆ, ವಿಶ್ವದ ಅತಿ ಉದ್ದದ ಕ್ಯಾಸೆಲ್ ಹೊಂದಿರುವ ಹೆಗ್ಗಳಿಕೆಯನ್ನು ಬುರ್ಗ್‌ಹೌಸೆನ್ ಕ್ಯಾಸೆಲ್ ತಂದುಕೊಟ್ಟಿದೆ.

ಕ್ಯಾಸೆಲ್ ಪರಿಸರದಲ್ಲಿ ಕೂತು, ಕಟ್ಟಿಕೊಂಡು ತಂದ ಬುತ್ತಿಯಲ್ಲಿದ್ದ ಪುಳಿಯೋಗರೆ, ಆಲೂ ಪರಾಠಾ ತಿನ್ನುವಾಗ ನಮಗಾದ ದೇಶಿ–ವಿದೇಶಿ ಸಂಗಮದ ಅನುಭವ ಮರೆಯಲಾಗದ್ದು.

ಪ್ರತಿಕ್ರಿಯಿಸಿ: feedback@sudha.co.in

